ಅನ್ನುವ ಗುಸುಗುಸು ಸುದ್ದಿಯಿತ್ತು.

ಜನಾ ಎಷ್ಟೆಲ್ಲಾ ರೀತಿಯಿಂದ ಮಾತನಾಡಿದರೂ ಅಲ್ಲಿ ಸುಲೋಚನಾಳೆ ದೋಷಿಯಾಗಿದ್ದಳು. ಆದರೆ ಇಷ್ಟಕ್ಕೆಲ್ಲಾ ಕಾರಣವಾಗಿದ್ದು ನಾನೇ ಎನ್ನುವುದನ್ನು ನನ್ನಂತರಾತ್ಮ ನನಗೆ ಚುಚ್ಚಿ ಹೇಳಿತ್ತು. ನಾನು ಸಮಾಜದೆದುರು ಬಾಯಿ ತೆರೆಯದೆ ಮೌನವಾಗಿದ್ದೆ. ಲೋಕದೆದುರು ನಾನೊಬ್ಬ ಮರ್ಯಾದಾ ಪುರುಷೋತ್ತಮ.

'ಪಾಪ ನಿನ್ನ ಹೆಂಡತಿ ಹೀಗೆ ಮಾಡಬಾರದಿತ್ತು' ಅನ್ನುವ ಜನರ ಕನಿಕರದ ಮಾತುಗಳು. ನಾನು ಮಾತಿಲ್ಲದೆ ತಲೆತಗ್ಗಿಸುತ್ತಿದ್ದೆ. ಇಷ್ಟೆಲ್ಲಾ ನಡೆದ ಮೇಲೂ ನಾನು ಮತ್ತೆ ಮದುವೆಯಾಗುವುದು ಯಾವ ಘನಕಾರ್ಯಕ್ಕಾಗಿ...'

ಕಿಟಕಿಯ ಬಾಗಿಲು ಗಾಳಿಗೆ 'ಪಟ್' ಎಂದು ಸದ್ದು ಮಾಡುತ್ತಾ ಮುಚ್ಚಿಕೊಂಡಾಗ ನೆನಪಿನಾಳದಿಂದ ಎತ್ತಿ ಹೊರಗೊಗೆದಂತಾಗಿತ್ತು ಕರುಣಾಕರನಿಗೆ. ಹಾಸಿಗೆಯ ಅಂಚಿನಲ್ಲಿಟ್ಟಿದ್ದ ಮೊಬೈಲನ್ನು ಕತ್ತಲಲ್ಲೇ ತಡಕಾಡಿ ಕೈಗೆತ್ತಿಕೊಂಡು ಮೊದಲು ಸಮಯ ನೋಡಿಕೊಂಡನು. ಗಂಟೆ ಮೂರು ದಾಟಿತ್ತು. ಗಾಳಿ, ಮಳೆಗೆ ಕರೆಂಟ್ ಇಲ್ಲವಾಗಿ ಮೊಬೈಲ್‌ನ ಟಾರ್ಚ್ ಆನ್ ಮಾಡಿ, ಹೋಗಿ ಕಿಟಕಿಯ ಬಾಗಿಲಿನ ಕೀಲಿ ಸಿಕ್ಕಿಸಿ ಬಂದು ಮಂಚದ ಮೇಲುರುಳಿದನು. ಮತ್ತೆ ಯೋಚನೆಗಳು ಅವನ ಮನಸ್ಸಿನೊಳಗೆ ದಾಳಿಯಿಟ್ಟವು. ನಡುವೆ ನಿದ್ರೆ ಯಾವಾಗ ಆವರಿಸಿತೋ ಅವನಿಗೆ ತಿಳಿಯಲಿಲ್ಲ.

* * *

ಚತುರ್ಮುಖ ಬಸದಿಯ ಹಾಸುಗಲ್ಲಿನ ಮೇಲೆ ಕುಳಿತು ಅವಳಿಗೆಲ್ಲವನ್ನು ವಿವರಿಸಿದನು ಕರುಣಾಕರ. ಅವನ ಮಾತುಗಳೆಲ್ಲವನ್ನು ಆಲಿಸಿದ ಸವಿತಾ ಹನಿಗಣ್ಣಾಗಿದ್ದಳು.

'ನನ್ನಿಂದ, ನನ್ನ ನಡೆನುಡಿಯಿಂದ ನಿಮಗೇನಾದರೂ ಬೇಸರವಾಗಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸಿ' ಎಂದು ಕರುಣಾಕರ ಸೌಮ್ಯವಾಗಿ ಕೇಳಿಕೊಂಡಾಗ ಅವಳು ತನ್ನ ಕಣ್ಣಂಚಿಗೆ ಕರವಸ್ತ್ರವನ್ನು ಒತ್ತಿಕೊಂಡಳು.

'ನಿಮ್ಮ ಹೆಂಡತಿ ಅನುಭವಿಸಿದ್ದು ಸಾಮಾನ್ಯವಾದ ನೋವಲ್ಲ. ಆದರೂ ಅವರು ತಾನು ಕಳೆದುಕೊಂಡ ಬದುಕನ್ನು ಮತ್ತೆ ಪಡೆದುಕೊಳ್ಳುವ ನಿಟ್ಟಿನಲ್ಲಿ ಹೋರಾಡಿದರು. ಅವರಿಬ್ಬರೇ ಎಲ್ಲಾದರೂ ದೂರ ಹೋಗಿ ಸುಖವಾದ ಜೀವನವನ್ನು ನಡೆಸಬಹುದಾಗಿತ್ತು. ಅದ್ಯಾಕೆ ಅಂಥಹ ದುಡುಕಿನ ನಿರ್ಧಾರವನ್ನು ತೆಗೆದುಕೊಂಡರೋ... ಸಾಯುವ ಸಮಯದಲ್ಲಿ ನಿಮ್ಮ ಚರ್ಯೆಯೆಲ್ಲವನ್ನು ಬಯಲಿಗೆಳೆದು ತಾನು ನಿರ್ದೋಷಿ ಎನಿಸಿಕೊಳ್ಳಬಹುದಾಗಿತ್ತಾದರೂ ಹಾಗೆ ಮಾಡದೆ, ಎಲ್ಲಾ ತಪ್ಪುಗಳು ತನ್ನವೇ ಎಂದು ಸಮಾಜ ಆಡಿಕೊಳ್ಳುವ ರೀತಿಯಲ್ಲಿ ಮರೆಯಾಗಿಬಿಟ್ಟರು' ವಿಷಾದದಿಂದ ನುಡಿದಳು.

'ಹೌದು. ನನ್ನ ತಪ್ಪಿನಿಂದಾಗಿ ಇಷ್ಟೆಲ್ಲಾ ನಡೆದುಹೋಯಿತು. ಆದರೆ ಮತ್ತೆ ಆ ತಪ್ಪು ನನ್ನಿಂದಾಗಬಾರದು. ಸುಲೋಚನಾಳಂತ ನೋವು, ಸಾವು ಮತ್ತೊಬ್ಬ ಹೆಣ್ಣಿಗಾಗಬಾರದೆಂದೇ ನಾನು ನಿಮಗೆಲ್ಲವನ್ನು ವಿವರಿಸಿದ್ದು' ಮುಕ್ತವಾಗಿ ನುಡಿದ ಕರುಣಾಕರನಿಗೆ ಈಗದೇನೋ ಒಂದು ನಿರಾಳತೆಯ ಭಾವ.



'ತಪ್ಪು ನಿಮ್ಮದಲ್ಲ. ತಪ್ಪು ಈ ಸಮಾಜದ್ದು. ಪ್ರಪಂಚದಲ್ಲಿರೋ ಪ್ರತಿಯೊಬ್ಬ ಮಾನವರಿಗೂ ಅವರವರದೇ ರೀತಿಯಲ್ಲಿ ಬದುಕುವ ಹಕ್ಕಿದೆ. ಹೆಣ್ಣು ಹಾಗೂ ಗಂಡು ಈ ಪ್ರಪಂಚದಲ್ಲಿ ಎಷ್ಟು ಗೌರವಯುತರೋ, ಗಂಡಿನೊಳಗಿನ ಹೆಣ್ಣುಮನ ಹಾಗೂ ಹೆಣ್ಣಿನೊಳಗಿನ ಗಂಡುಮನಸ್ಸಿನವರೂ ಕೂಡಾ ಅಷ್ಟೇ ಗೌರವಕ್ಕೆ ಅರ್ಹರು ಎಂಬುವುದನ್ನು ಸಮಾಜ ಅರಿತುಕೊಳ್ಳಬೇಕು. ಅಂತಹ ಮನಸ್ಥಿತಿಯನ್ನು ಆದರಿಸುವ ಮನೋಭಾವ ಕುಟುಂಬ ಜೀವನದಿಂದಲೇ ಆರಂಭವಾಗಬೇಕು. ಎಲ್ಲರಂತೆಯೇ ನಿಮ್ಮಗಳಿಗೂ